# ಆನಂದದ ಅನ್ವೇಷಣೆ

**ಬಹುಶಃ** ಈ ಕಥೆಯನ್ನು ನಾವೆಲ್ಲರೂ ಕೇಳಿದ್ದೇವೆ: ಒಬ್ಬ ರಾಜನಿದ್ದ. ಅವನಿಗೆ ರೂಪ, ಯೌವನ, ಆರೋಗ್ಯ, ಸಾಮರ್ಥ್ಯ, ಬುದ್ಧಿಶಕ್ತಿ, ಕೌಟುಂಬಿಕ ನೆಮ್ಮದಿ, ಐಶ್ವರ್ಯ, ಗೌರವ– ಹೀಗೆ ಲೌಕಿಕ ಬದುಕಿನ ಎಲ್ಲ ಭಾಗ್ಯಗಳೂ ಧಾರಾಳವಾಗಿದ್ದುವು. ಆದರೆ, ಇಷ್ಟೆಲ್ಲ ಇದ್ದರೂ ಆತನನ್ನು ಯಾವುದೋ ಕೊರತೆಯೊಂದು ಕಾಡಿಸುತ್ತಿತ್ತು. ತನ್ನಲ್ಲಿ ನಿಜವಾದ ಆನಂದವಿಲ್ಲವೆಂದು ಅವನಿಗೆ ತಿಳಿದಾಗ ತನ್ನ ಗುರುಗಳಲ್ಲಿಗೆ ಹೋಗಿ, 'ಎಲ್ಲವೂ ಇದ್ದರೂ ನನ್ನ ಪಾಲಿಗೆ ಆನಂದವಿಲ್ಲ ಗುರುಗಳೇ, ಅದನ್ನು ದೊರಕಿಸಿಕೊಳ್ಳುವುದು ಹೇಗೆ, ದಯಮಾಡಿ ದಾರಿ ತೋರಿಸಿ' ಎಂದು ಅಂಗಲಾಚಿದ. ಗುರುಗಳು ನಕ್ಕು ಹೇಳಿದರು: 'ಅಷ್ಟೇ ತಾನೇ? ಸುಲಭದ ದಾರಿಯಿದೆ. ಸಂಪೂರ್ಣ ಆನಂದವನ್ನು ಹೊಂದಿರುವ ಒಬ್ಬ ವ್ಯಕ್ತಿಯ ಒಂದು ಬಟ್ಟೆಯನ್ನು ಧರಿಸು. ಅವನ ಆನಂದ ನಿನಗೂ ದೊರೆಯುತ್ತದೆ.' ರಾಜನಿಗೆ ಖುಷಿಯಾಯಿತು. ಆತನ ಆಜ್ಞೆಯಂತೆ ರಾಜಭಟರು ಅಂಥ ವ್ಯಕ್ತಿಗಾಗಿ ಹುಡುಕಿಯೇ ಹುಡುಕಿದರು. ಎಲ್ಲರಲ್ಲೂ ಒಂದೋ, ಎರಡೋ, ಹಲವಾರೋ ಚಿಂತೆಗಳು. ಕೊನೆಗೂ ಒಬ್ಬ ಸಿಕ್ಕ. ಒಂದು ಮರದ ಕೆಳಗೆ ಕಲ್ಲಿನ ಮೇಲೆ ಮಲಗಿ, ನಿರಾತಂಕವಾಗಿ ಹಾಡುತ್ತಾ ಮಲಗಿದ್ದ. ಸೊಂಟಕ್ಕೊಂದು ತುಂಡು ಬಟ್ಟೆಯಷ್ಟೆ ಅವನ ಉಡುಪು. ಆದರೆ ಮುಖದಲ್ಲಿ ಪ್ರಶಾಂತ ಆನಂದ ಮಿನುಗುತ್ತಿತ್ತು. ಅವನಿಗೆ ಯಾವ ಚಿಂತೆಯೂ ಇಲ್ಲದುದನ್ನು ತಿಳಿದು ಭಟರು ಅವನನ್ನು ರಾಜನಲ್ಲಿಗೆ ಕರೆತಂದರು. ಅವನಲ್ಲಿ ನಿಜವಾದ ಆನಂದ ವಿದ್ದುದನ್ನು ರಾಜ ನೋಡಿದ. ಆದರೆ ಅವನಲ್ಲಿ ರಾಜನಿಗೆ ಕೊಡಲು ಬಟ್ಟೆಯೇ ಇರಲಿಲ್ಲ. ರಾಜನಿಗೆ ಅರ್ಥವಾಯಿತು– ಆನಂದವೆಂಬುದು ಬಾಹ್ಯಪರಿಕರಿಗಳಲ್ಲಿಲ್ಲ, ಅದೊಂದು ಮನಃಸ್ಥಿತಿ ಎಂದು.

ಲೌಕಿಕರಾದ ನಮ್ಮೆಲ್ಲರನ್ನೂ ಆ ರಾಜ ಪ್ರತಿನಿಧಿಸುತ್ತಾನೆ. ಸುಖ, ಸಂತೋಷ, ಆನಂದ– ಈ ಮೂರರಲ್ಲಿ ಮೊದಲೆರಡನ್ನು ಪಡೆಯಲು ಇಷ್ಟಪಡುವವರೇ ಹೆಚ್ಚು. ಆನಂದದ ಕುರಿತಾದ ತುಡಿತ ಎಲ್ಲೋ ಕೆಲವರಲ್ಲಿ ಮಾತ್ರ. ಶಾರೀರಿಕವಾಗಿ, ಮಾನಸಿಕವಾಗಿ, ಪ್ರಾಪಂಚಿಕವಾಗಿ ನೆಮ್ಮದಿಯಾಗಿದ್ದು, ನಮಗೆ ಇಷ್ಟವೆನ್ನಿಸುವ ಅನುಭವಗಳನ್ನು ಆಸ್ವಾದಿಸುವ ಅವಕಾಶ ಹಾಗೂ ಎಲ್ಲ ದೃಷ್ಟಿಗಳಿಂದಲೂ ಸುರಕ್ಷಿತತೆಯ ಭಾವ ನಮ್ಮ ಪಾಲಿಗೆ ಇರುವಾಗ ನಾವು ಸುಖಿಗಳಾಗಿರುತ್ತೇವೆ, ನಮಗೆ ಸಂತೋಷವಿರುತ್ತದೆ– ಎಂಬುದು ನಮ್ಮ ಅನ್ನಿಸಿಕೆ. ಅವುಗಳ ನಷ್ಟವೇ ದುಃಖಕ್ಕೆ ಕಾರಣವಾಗುತ್ತದೆ. ಅಂದರೆ, ಸುಖ ಸಂತೋಷಗಳು ಕೆಲವೊಂದು ಸಂಗತಿಗಳ ಮೇಲೆ, ಪರಿಸ್ಥಿತಿಗಳ ಮೇಲೆ ಅವಲಂಬಿಸಿದೆ ಎಂದಾಯಿತು, ಜೊತೆಗೆ ಅವು ಸಾಪೇಕ್ಷವಾದಂಥವು. ಶರೀರ, ಮನಸ್ಸು, ಪ್ರಪಂಚ– ಈ ಮೂರರ ಸಂಪರ್ಕದಲ್ಲಿರುವ ನಮಗೆ ಅವುಗಳಲ್ಲಿ ಯಾವುದಾದರೊಂದರಲ್ಲಿ ವ್ಯತ್ಯಯವುಂಟಾದರೂ, ನಮ್ಮಲ್ಲಿನ ಸುಖ ಸಂತೋಷಗಳು ಕ್ಷೀಣಿಸುತ್ತವೆ, ಇಲ್ಲವೇ ಮರೆಯಾಗುತ್ತವೆ.

ಆದರೆ ಆನಂದವೆಂಬುದು ಇಂಥದಲ್ಲ; ಅದು ನಿರುಪಾಧಿಕವಾದುದು, ನಿರಪೇಕ್ಷವಾದುದು. ಒಂದು ಸುಂದರ ಮುಂಜಾನೆಯನ್ನು ಕಂಡಾಗ, 'ಇದು ಬರಿ ಬೆಳಗಲ್ಲೋ ಅಣ್ಣಾ!' ಎಂದು ಉದ್ಗರಿಸುವಂತಾಗುವುದು ನಮ್ಮ ಹೃದಯದಲ್ಲಿ ಚಿಮ್ಮುವ ಇಂಥ ಉಪಾಧಿರಹಿತ ಆನಂದದಿಂದ. 'ಆನಂದಮಯ ಈ ಜಗ ಹೃದಯ' ಎಂಬ ಅರಿವು ನಮ್ಮಲ್ಲಿ ಅರಳಿಕೊಂಡಾಗ, ನಮ್ಮ ಸುತ್ತಲೂ ಆನಂದದ ಇರುವಿಕೆಯ ಅನುಭವ ನಮಗಾಗುತ್ತದೆ. ಒಂದು ಪುಟ್ಟ ಮಗುವಿನ ನಿರ್ಮಲ ಮುಗ್ಧ ನಗುವಿನಲ್ಲಿ ಯಾವುದೋ ಹೂವಿನ ವರ್ಣ ವೈಭವದಲ್ಲಿ, ಅಜ್ಞಾತಪಕ್ಷಿಯೊಂದರ ಕುಕಿಲಿನಲ್ಲಿ, ನೀಲಾಕಾಶದಲ್ಲಿನ ಚಿಕ್ಕೆಗಳ ಕಾಂತಿಯಲ್ಲಿ– ಹೀಗೆ ಎಲ್ಲ ಕಡೆಗಳಲ್ಲಿ ಅನೂಹ್ಯ, ಅನಿರ್ವಚನೀಯ ವೆನ್ನಿಸುವ ಆನಂದ ನಮ್ಮ ಪಾಲಿಗೆ ದೊರೆಯುತ್ತದೆ. ಇದರಿಂದಾಗಿ ಬದುಕೆಂಬುದು ಸುಂದರವೆನ್ನಿಸುತ್ತದೆ; ಪರಿಪೂರ್ಣವೆನ್ನಿಸುತ್ತದೆ. ಇಂಥ ಶುದ್ಧ ಆನಂದ ಅವ್ಯಯವಾದುದು, ಅವಿನಾಶಿಯಾದುದು ಎಂಬುದು ಆತ್ಮಸಾಕ್ಷಾತ್ಕಾರವನ್ನು ಪಡೆದ ಯೋಗಿಗಳ ಅನುಭವ. ಆದ್ದರಿಂದಲೇ ಉಪನಿಷತ್ತಿನ ಋಷಿಗಳು 'ಆನಂದವನ್ನೇ ಬ್ರಹ್ಮವೆಂದು, ತಿಳಿಯಬೇಕು' ಎಂದು ಹೇಳಿದರು!

■ ವೈನತೇಯ

# ಮಾತೇ ಮುತ್ತು

★ ಗುಲಾಮನನ್ನು ಪಳಗಿಸಲು ಹೆಣಗುವ ಮಾಲೀಕನ ಮನಸ್ಸಿನ ತುಂಬಾ ಗುಲಾಮತನ ತುಂಬಿರುತ್ತದೆ.

–ಹೆಗೆಲ್

★ ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತರಿಗೆ ರಾಜಕೀಯ ಸ್ಥಾನಮಾನ ಸಿಗಬೇಕೆಂಬ ಸಿದ್ಧಾಂತವು ಸ್ತ್ರೀಯರಿಗೆ ಮಾತ್ರ ಮೀಸಲಾಗದೆ, ಅವರನ್ನೂ ಒಳಗೊಂಡಂತೆ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಕ್ಕೆ ಅನ್ವಯವಾಗಬೇಕಾದದ್ದು ನ್ಯಾಯಸಮ್ಮತ.

–ಬರಗೂರು ರಾಮಚಂದ್ರಪ್ಪ

★ ದುಃಖವು ಸುಖಕ್ಕೆ ಒಂದು ಬಗೆಯ ಆಲೋಚನಾ ಪೂರ್ಣವಾದ ಗಾಂಭೀರ್ಯವನ್ನು ಕೊಡುತ್ತದೆ; ಸುಖವು ದುಃಖದ ಉಬ್ಬರವನ್ನು ತಗ್ಗಿಸಿ ಸಹ್ಯವಾಗಿಸುತ್ತದೆ.

–ಎ.ಎನ್.ಮೂರ್ತಿರಾವ್

★ ಮನುಷ್ಯನ ಆಯುಷ್ಯದಲ್ಲಿ ಕೇವಲ ಸುಖವಾಗಲಿ, ಕೇವಲ ದುಃಖವಾಗಲಿ ಒದಗದೆ, ಸುಖ– ದುಃಖಗಳೆರಡೂ ಕಾಲಕ್ಕನುಸರಿಸಿ ಒದಗುತ್ತಿರುತ್ತವೆ.

–ಗಳಗನಾಥ

★ ಸುಖ ಅಪರೂಪಕ್ಕೆ ಬರುವ ನೆಂಟನಾದರೆ, ದುಃಖ ಎಂದೂ ನಮ್ಮನ್ನು ಬಿಡುವುದಿಲ್ಲ.

–ಜಾನ್ ಈಟ್ಸ್

★ ನಮ್ಮ ದುಃಖವನ್ನು ಇನ್ನೊಬ್ಬರ ಮೇಲೆ ಹಾಕಿ ನಾವು ಸುಖವಾಗಿರಬಹುದು ಎಂಬ ಮಾತು ಸುಳ್ಳು.

–ಶಿವರಾಮ ಕಾರಂತ

★ ನಾನು 'ಸುಖಿ' ಎಂದುಕೊಳ್ಳದ ಯಾರೂ 'ಸುಖಿ' ಆಗಲಾರ.

–ಪಬ್ಲಿಯಸ್ ಸೈರಸ್

★ ಐಶ್ವರ್ಯವನ್ನು ಸಂಪಾದಿಸದೆ ಅದನ್ನು ಅನುಭವಿಸುವುದಕ್ಕೆ ಆಗದಿರುವಂತೆಯೇ, ಸುಖವನ್ನು ಸೃಷ್ಟಿಸದೆ ಅದನ್ನು ಅನುಭವಿಸುವ ಹಕ್ಕು ಇಲ್ಲ.

–ಜಾರ್ಜ್ ಬರ್ನಾರ್ಡ್ ಶಾ

★ ಯಾವುದೇ ಆದರ್ಶ ಶಾಶ್ವತವಾಗಿ ಇರಲು ಸಾಧ್ಯವಿಲ್ಲ. ನಮ್ಮ ಆದರ್ಶದ ಮೌಲ್ಯಗಳ ಪುನರ್‌ಮೌಲ್ಯೀಕರಣಕ್ಕೆ ಯಾವತ್ತೂ ಅವಕಾಶ ಇರಬೇಕು.

–ಬಿ.ಆರ್.ಅಂಬೇಡ್ಕರ್

★ ಅಸಾಧಾರಣ ಜ್ಞಾಪಕಶಕ್ತಿ ಬೇಕಯ್ಯ ಸುಳ್ಳಿಗೆ, ರಂಗಯ್ಯ; ಸಾಧಾರಣ ನೆನಪು ಸಾಕಯ್ಯ ಸತ್ಯಕ್ಕೆ.

–ಎಸ್.ವಿ.ರಂಗಣ್ಣ

★ ಗುಣಪಡಿಸುವ 'ಸುಳ್ಳು', ಗಾಯ ಮಾಡುವ 'ಸತ್ಯ'ಕ್ಕಿಂತ ಲೇಸು.

–ಜೆಕ್ ಗಾದೆ

★ ಶುಕ್ಲಪಕ್ಷದ ಚಂದ್ರನಂತೆ ಸಜ್ಜನರ ಸಂಗ; ಕೃಷ್ಣಪಕ್ಷದ ಚಂದ್ರನಂತೆ ಮೂರ್ಖರ ಸಂಗ.

–ತಿರುವಳ್ಳುವರ್

★ ಸ್ನೇಹಕ್ಕೆ ನೂರಾರು ಕಾರಣಗಳಿರುವಂತೆಯೇ ದ್ವೇಷಕ್ಕೆ ಹಲವಾರು ಕಾರಣಗಳಿರುತ್ತವೆ; ಸಂಬಂಧ ಚಿರಂತನವಾದದ್ದು ಎಂದು ಹೊರಡುವುದೇ ತಪ್ಪು.

–ಪಿ.ಲಂಕೇಶ್

★ ಅಧಿಕಾರದಲ್ಲಿರುವ ಸ್ನೇಹಿತನೆಂದರೆ ಕಳೆದುಹೋದ ಸ್ನೇಹಿತನೆಂದೇ.

–ಹೆನ್ರಿ ಬ್ರೂಕ್ಸ್ ಅಡಂಸ್

★ ಎಷ್ಟೋ ಬಾರಿ ಗೆಲುವು ಸೋಲಿನ ರೂಪದಲ್ಲಿ ಬರುತ್ತದೆ.

–ರಾಬರ್ಟ್ ಬ್ರೌನಿಂಗ್